(ಅನುಬಂದ–1)

2. <u>ಸಭೆಯ ಮುಂದಿಡಲಾದ ಕಾಗದ ಪತ್ರಗಳು</u>

1. ಡಾ. ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು): ನನ್ನ ಹೆಸರಿನ ಮುಂದೆ ಇರುವ ಈ ಕೆಳಕಂಡ ಕಾಗದ ಪತ್ರಗಳನ್ನು ಮಂಡಿಸುತ್ತೇನೆ.

<u>1978ರ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮ 8(3)ರ ಪ್ರಕರಣದ ಮೇರೆಗೆ:</u>

1. 1993ರ ಕರ್ನಾಟಕ ಆಡಳಿತ ನ್ಯಾಯ ಮಂಡಳಿ (ನೇಮಕಾತಿ) ನಿಯಮಗಳ ಅನುಸೂಚಿಗೆ ತಿದ್ದುಪಡಿ ಮಾಡಿ ದಿನಾಂಕ:5.09.2007ರಂದು ಹೊರಡಿಸಲಾದ ಡಿಪಿಎಆರ್:07:ಸೇಆನ್ಯಾ:2006ನೇ ಸಂಖ್ಯೆಯ ಅಧಿಸೂಚನೆ.

2. 1977ರ ಕರ್ನಾಟಕ ನಾಗರೀಕ ಸೇವಾ(ಸಾಮಾನ್ಯ ನೇಮಕಾತಿ) ನಿಯಮಗಳ ನಿಯಮ 6ರ ಉಪನಿಯಮ(1)ಕ್ಕೆ ತಿದ್ದುಪಡಿ ಮಾಡಿ ದಿನಾಂಕ:18.12.2008ರಂದು ಹೊರಡಿಸಲಾದ ಡಿಪಿಎಆರ್:42:ಎಸ್ಆರ್ಆರ್:2008ನೇ ಸಂಖ್ಯೆಯ ಅಧಿಸೂಚನೆಗಳು.

2. ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ನನ್ನ ಹೆಸರಿನ ಮುಂದೆ ಇರುವ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

<u>1983ರ ಕರ್ನಾಟಕ ಶಿಕ್ಷಣ ಅಧಿನಿಯಮ (1995 ಕರ್ನಾಟಕ ಅಧಿನಿಯಮ–1) 145(4)ರ ಪ್ರಕರಣದ ಮೇರೆಗೆ:</u>

1999ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಅನುದಾನಿತ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ, ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮಗಳ ಅನುಬಂಧ–1ಕ್ಕೆ ತಿದ್ದುಪಡಿಗೊಳಿಸಿ ದಿನಾಂಕ:22.11.2008ರಂದು ಹೊರಡಿಸಲಾದ ಇಡಿ/17/ಎಸ್ಎಲ್ಬಿ/2008ನೇ ಸಂಖ್ಯೆಯ ಅಧಿಸೂಚನೆ .

3. <u>ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು, ಮತ್ತು ಸಂಸದೀಯ ವ್ಯವಹಾರ ಮತ್ತು ಪೌರಾಡಳಿತ ಸಚಿವರು:</u> ಮಾನ್ಯ ಜಲಸಂಪನ್ಮೂಲ ಸಚಿವರ ಪರವಾಗಿ, ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

<u>1965ರ ಕರ್ನಾಟಕ ಜಲಸಂಪನ್ಮೂಲ ಅಧಿನಿಯಮ 71(4)ರ ಪ್ರಕರಣದ ಮೇರೆಗೆ:</u>

1. 1965ರ ಕರ್ನಾಟಕ ನೀರಾವರಿ ಅಧಿನಿಯಮದ (1965ರ ಕರ್ನಾಟಕ ಅಧಿನಿಯಮ 16) ನಿಯಮಾವಳಿಗಳ ರೀತ್ಯಾ ಕರ್ನಾಟಕ ಸರ್ಕಾರವು 'ಚಂದ್ರಪಳ್ಳಿ' ನೀರಾವರಿ ಯೋಜನೆಯನ್ನು ನೀರು ಬಳಕೆದಾರರ ವಿತರಣಾ ಮಟ್ಟದ ಮಹಾಮಂಡಳಿಯ ಸಂಬಂಧಿತ ಉಪಬಂಧಗಳು ಅನ್ವಯಿಸುವುದಕ್ಕೆ ವಿನಾಯಿತಿ ನೀಡಿ ದಿನಾಂಕ:09.09.2008ರಂದು ಹೊರಡಿಸಲಾದ ಡಬ್ಲ್ಯೂಆರ್‌ಡಿ/16/ಸಿಎಎಂ/2008ನೇ ಸಂಖ್ಯೆಯ ಅಧಿಸೂಚನೆ.

<u>1980ರ ಕರ್ನಾಟಕ ಜಲಾನಯನ ಪ್ರದೇಶ ಅಭಿವೃದ್ಧಿ ಅಧಿನಿಯಮ 46(3)ರ ಪ್ರಕರಣದ ಮೇರೆಗೆ:</u>

2. 1980ರ ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಅಧಿನಿಯಮದ ಅಡಿ ದಿನಾಂಕ:30.10.2004 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಡಬ್ಲ್ಯೂಆರ್‌ಡಿ/6/ಸಿಎಎಂ/2004ರ ಕ್ರ.ಸಂ.5ರಲ್ಲಿನ ಕಲಂ(3)ರಲ್ಲಿರುವ 'ಗಾಯತ್ರಿ' ಎಂಬ ಪದದ ನಂತರ 'ಭೀಮ ಸಮುದ್ರ ಟ್ಯಾಂಕ್' ಎಂಬ ಪದಗಳನ್ನು ಸೇರ್ಪಡೆಗೊಳಿಸಿ ದಿನಾಂಕ: 01.12.2008 ರಂದು ಹೊರಡಿಸಲಾದ ಡಬ್ಲ್ಯೂಆರ್‌ಡಿ/14/ಸಿಎಬಿ/2007ನೇ ಸಂಖ್ಯೆಯ ಅಧಿಸೂಚನೆಗಳು

4. <u>ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು (ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):</u> ನನ್ನ ಹೆಸರಿನ ಮುಂದೆ ಇರುವ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

<u>2000ರ ಮಾಹಿತಿ ತಂತ್ರಜ್ಞಾನ ಆಯ್ದೆ 90(3)ರ ಪ್ರಕರಣದ ಮೇರೆಗೆ:</u>

2000ರ ಕರ್ನಾಟಕ ಮಾಹಿತಿ ತಂತ್ರಜ್ಞಾನ (2000ರ ಕೇಂದ್ರ ಕಾಯ್ದೆ 21) ಅಧಿನಿಯಮದ ಕಲಂ 90ರ ಅಡಿಯಲ್ಲಿ ಮಾಹಿತಿ ತಂತ್ರಜ್ಞಾನ (ಕರ್ನಾಟಕ) ನಿಯಮಾವಳಿಗಳನ್ನು ರಚಿಸಿ ದಿನಾಂಕ:05.08.2004ರಂದು ಹೊರಡಿಸಲಾದ ಐಟಿಡಿ/07/ಪಿಆರ್‌ಎಂ/2004ನೇ ಸಂಖ್ಯೆಯ ಅಧಿಸೂಚನೆ

5. <u>ಡಾ.ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿ):</u> ನನ್ನ ಹೆಸರಿನ ಮುಂದೆ ಇರುವ ಈ ಕೆಳಕಂಡ ಕಾಗದ ಪತ್ರಗಳನ್ನು ಮಂಡಿಸುತ್ತೇನೆ.

<u>ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಕಾಯ್ದೆ 1951ರ ಕಲಂ 37 (6) (7)ರ ಪ್ರಕಾರ:</u>